ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ನಿಗಮ ಕಾರ್ಯಾಲಯ,
ಚಾವಿಸನಿನಿ, ಮೈಸೂರು-570017
Telephone No:0821-2417107

**CHAMUNDESHWARI ELECTRICITY SUPPLY CORPORATION LIMITED**
*(A Government of Karnataka Undertaking)*
Corporate Office,
CESC, Mysuru-570017
**Web Site: www.cescmysore.org.**
E-mail ID: gmtech@cescmysore.org

Company Identity Number[CIN]:- **U40109KA2004SGC035177**

ಸಂಖ್ಯೆ: ಚಾವಿಸನಿನಿ/ಪ್ರವ್ಯ(ತಾ)/ಉಪ್ರವ್ಯ(ಎಂಐಎಸ್)/ಸಪ್ರವ್ಯ-2/ವ್ಯ/22-23/ 4479-83 ದಿನಾಂಕ: 01 JUN 2022

ಮುಖ್ಯ ಇಂಜಿನಿಯರ್ (ವಿ),
ಕಾರ್ಯ ಮತ್ತು ಪಾಲನಾ ವಲಯ,
ಚಾವಿಸನಿನಿ, ಮೈಸೂರು.

ಮಾನ್ಯರೇ,

**ವಿಷಯ:** 220 ಕೆವಿ ಮತ್ತು 66 ಕೆವಿ ವಿದ್ಯುತ್ ಪ್ರಸರಣ ಮಾರ್ಗಗಳ ಮಾರ್ಗಮುಕ್ತತೆಗೆ ಪಡೆಯಲು ಅನುಮೋದನೆ ನೀಡುವ ಬಗ್ಗೆ.

**ಉಲ್ಲೇಖ:** 1. ಮುಇಂ(ವಿ)/ಅಇಂ(ವಿ)/ಸಇಂ(ಕ)-1/2022-23/1202-06 ದಿನಾಂಕ:23.05.2022.
2. ನಿರ್ದೇಶಕರು(ತಾಂತ್ರಿಕ)ರವರ ಅನುಮೋದಿತ ಟಿಪ್ಪಣಿ ದಿನಾಂಕ: 30.05.2022.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕೆಐಎಡಿಬಿ ವತಿಯಿಂದ ಸ್ವಯಂ ಕಾಮಗಾರಿಯಡಿಯಲ್ಲಿ ಮೈಸೂರು ನಗರ, ಕೂರ್ಗಳ್ಳಿ, ಕೈಗಾರಿಕಾ ಪ್ರದೇಶ ವ್ಯಾಪ್ತಿಯಲ್ಲಿ ಹಾದು ಹೋಗಿರುವ 220 ಕೆವಿ ಮತ್ತು 66 ಕೆವಿ ಅಧಿಕ ವಿದ್ಯುತ್ ಮಾರ್ಗಗಳ ಸ್ಥಳಾಂತರ/ ಎತ್ತರಿಸುವುದು/ ಮಾರ್ಪಡು ಮಾಡುವ ಸಂಬಂಧ ಮಾರ್ಗಗಳಲ್ಲಿನ ಟವರ್ ಬದಲಾವಣೆ ಮತ್ತು ವಾಹಕವನ್ನು ಎಳೆಯುವ ಕಾರ್ಯವನ್ನು ಹಮ್ಮಿಕೊಳ್ಳಲು ದಿನಾಂಕ 12.06.2022 ರಂದು ಬೆಳಿಗ್ಗೆ 06:00 ಗಂಟೆಯಿಂದ ಸಂಜೆ 06:00 ಗಂಟೆಯವರೆಗೆ ಈ ಕೆಳಕಂಡ 220 ಕೆವಿ ಮತ್ತು 66 ಕೆವಿ ವಿದ್ಯುತ್ ಪ್ರಸರಣ ಮಾರ್ಗಗಳ ಮಾರ್ಗ ಮುಕ್ತತೆ ಪಡೆಯಲು ಸಹಮತ ನೀಡುವಂತೆ ಕೋರಿರುತ್ತಾರೆಂದು ತಿಳಿಸೀರುತ್ತೀರಿ.

ಮುಂದುವರೆದು, ಈ ಕೆಳಗೆ ತಿಳಿಸಿರುವ ಮಾರ್ಗಗಳಿಗೆ ಮಾರ್ಗಮುಕ್ತತೆ ಪಡೆದ ಸಂದರ್ಭದಲ್ಲಿ ಪರ್ಯಾಯ ವ್ಯವಸ್ಥೆ ಮಾಡಬಹುದೆಂದು ತಿಳಿಸಿರುವುದರಿಂದ ದಿನಾಂಕ 12.06.2022 ರಂದು ಬೆಳಿಗ್ಗೆ 06:00 ಗಂಟೆಯಿಂದ ಸಂಜೆ 06:00 ಗಂಟೆಯವರೆಗೆ ತಾವು ಸಹ ಮಾರ್ಗಮುಕ್ತತೆಗೆ ಅನುಮೋದನೆ ನೀಡಿರುತ್ತೀರಿ.

| ಕ್ರ.ಸಂ | **220 ಕೆ.ವಿ ಮಾರ್ಗಗಳು** |
|---|---|
| 1 | 220 ಕೆವಿ ಬಸ್ತಿಪುರ- ಕಡಕೊಳ ಜೋಡಿಮಾರ್ಗ (Import) |
| 2 | 220 ಕೆವಿ ಕಡಕೊಳ-ಬೇಗೂರು ಮಾರ್ಗ (Export) |
| 3 | 220 ಕೆವಿ ಕಡಕೊಳ-ಕನ್ನಿಯಂ ಬೆಟ್ಟ ಮಾರ್ಗ (Export) |
| 4 | 220 ಕೆವಿ ಬಸ್ತಿಪುರ-ಹೂಟಗಳ್ಳಿ (Import) |
| 5 | 220 ಕೆವಿ ಹೂಟಗಳ್ಳಿ- ವಾಜಮಂಗಲ ಮಾರ್ಗ |
| 6 | 66/11 ಕೆವಿ ಹೂಟಗಳ್ಳಿ-ಬಾರ್ಕ್ ಜೋಡಿ ಮಾರ್ಗ |
| 7 | 66/11 ಕೆವಿ ಹೂಟಗಳ್ಳಿ – ಬನ್ನಿಕುಪ್ಪೆ ಏಕ ಮಾರ್ಗ |
| 8 | 66 ಕೆವಿ ಹೂಟಗಳ್ಳಿ –ಇಲವಾಲ ಏಕ ಮಾರ್ಗ |

ಆದುದರಿಂದ, ಕೆಐಎಡಿಬಿ ವತಿಯಿಂದ ಸ್ವಯಂ ಕಾಮಗಾರಿಯಡಿಯಲ್ಲಿ ಮೈಸೂರು ನಗರ, ಕೂರ್ಗಳ್ಳಿ, ಕೈಗಾರಿಕಾ ಪ್ರದೇಶ ವ್ಯಾಪ್ತಿಯಲ್ಲಿ ಹಾದು ಹೋಗಿರುವ 220 ಕೆವಿ ಮತ್ತು 66 ಕೆವಿ ಅಧಿಕ ವಿದ್ಯುತ್ ಮಾರ್ಗಗಳ ಸ್ಥಳಾಂತರ/ ಎತ್ತರಿಸುವುದು/ ಮಾರ್ಪಡು ಮಾಡುವ ಸಂಬಂಧ ಮಾರ್ಗಗಳಲ್ಲಿನ ಟವರ್ ಬದಲಾವಣೆ ಮತ್ತು ವಾಹಕವನ್ನು ಎಳೆಯುವ ಕಾರ್ಯವನ್ನು ಹಮ್ಮಿಕೊಳ್ಳಲು ದಿನಾಂಕ 12.06.2022 ರಂದು ಬೆಳಿಗ್ಗೆ 06:00 ಗಂಟೆಯಿಂದ ಸಂಜೆ 06:00 ಗಂಟೆಯವರೆಗೆ ಮಾರ್ಗಮುಕ್ತತೆ ಪಡೆಯಲು ಮಾರ್ಗಮುಕ್ತತೆಗೆ ನಿರ್ದೇಶಕರು(ತಾಂತ್ರಿಕ) ರವರು ಉಲ್ಲೇಖ(2) ರಲ್ಲಿ ಅನುಮೋದಿಸಿರುತ್ತಾರೆ.

ಈ ನಿಟ್ಟಿನಲ್ಲಿ, ಸಂಬಂಧಪಟ್ಟ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನಾ ವಿಭಾಗ ರವರು, ಮಾರ್ಗಮುಕ್ತತೆಯ ದಿನದಂದು ಐ.ಪಿ ಸ್ಥಾವರಗಳಿಗೆ ಬದಲಾದ ಸಮಯದಲ್ಲಿ ವಿದ್ಯುತ್ ಪೂರೈಸುವಂತೆ ಕ್ರಮ ವಹಿಸಲು, ಕೋವಿಡ್ ಕೇರ್ ಸೆಂಟರ್ ಆಸ್ಪತ್ರೆಗಳಿಗೆ ಬದಲಿ ವಿದ್ಯುತ್ ಸರಬರಾಜು ವ್ಯವಸ್ಥೆ ಮಾಡಲು ಹಾಗೂ ಗ್ರಾಹಕರುಗಳಿಗೆ ವಿದ್ಯುತ್ ವ್ಯತ್ಯಯದ ಮಾಹಿತಿಯನ್ನು ಮುಂಚಿತವಾಗಿ ಪತ್ರಿಕಾ ಪ್ರಕಟಣೆಯ ಮೂಲಕ ತಲುಪಿಸಲು ಮತ್ತು ಸದರಿ ದಿನಾಂಕದಂದು ಕೇಂದ್ರ ಸ್ಥಾನದಲ್ಲೇ ಇದ್ದು ಕೆ.ಪಿ.ಟಿ.ಸಿ.ಎಲ್ ಅಧಿಕಾರಿಗಳೊಂದಿಗೆ ಸಮನ್ವಯ ಸಾಧಿಸಿ ಲೋಡ್ ಮಾನಿಟರಿಂಗ್ ಮಾಡುವಂತೆ ಸೂಚಿಸಲು ನಿರ್ದೇಶಿಸಲ್ಪಟ್ಟಿರುತ್ತೇನೆ.

**ಸೂಚನೆ: ಮೇಲೆ ತಿಳಿಸಿರುವ ಮಾರ್ಗಮುಕ್ತತೆಯ ದಿನಾಂಕಗಳಂದು ಯಾವುದೇ ಸರ್ಕಾರಿ ಕಾರ್ಯಕ್ರಮಗಳು/ಪರೀಕ್ಷೆಗಳಿದ್ದಲ್ಲಿ ಸದರಿ ದಿನಾಂಕದಂದು ಮಾರ್ಗಮುಕ್ತತೆಯು ರದ್ದಾಗುವುದೆಂದು ತಿಳಿಸಲು ನಿರ್ದೇಶಿಸಲ್ಪಟ್ಟಿದ್ದೇನೆ.**

ತಮ್ಮ ವಿಶ್ವಾಸಿ,

1.6.2022

ಪ್ರಧಾನ ವ್ಯವಸ್ಥಾಪಕರು (ತಾಂತ್ರಿಕ),
ಚಾವಿಸನಿನಿ, ಮೈಸೂರು

ಪ್ರತಿಗಳು :

1. ಮುಖ್ಯ ಇಂಜಿನಿಯರ್(ವಿ) ಪ್ರಸರಣ ವಲಯ, ಕವಿಪ್ರನಿನಿ, ಮೈಸೂರು.
2. ಅಧೀಕ್ಷಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನಾ ವೃತ್ತ ಮೈಸೂರು/ಮಂಡ್ಯ/ಚಾಮರಾಜನಗರ-ಕೊಡಗು, ಚಾವಿಸನಿನಿ.
3. ಆ.ಸ/ತಾ.ಸ., ವ್ಯನಿ/ನಿ(ತಾಂ). ರವರು ಇದನ್ನು ಮಾನ್ಯ ವ್ಯನಿ/ನಿ(ತಾಂ) ರವರ ದಯಾಪರ ಗಮನಕ್ಕೆ ತರಲು ಕೋರಲಾಗಿದೆ.

ಮುಖ್ಯ ಕಡತ/ ಕಛೇರಿ ಪ್ರತಿ.